ಶ್ರೀಮತಿ ಕೆ.ಎಸ್. ನಾಗರತ್ನಮ್ಮ.—ತಮಗೆ ನಾವು ಅಭಾರಿಯಾಗಿದ್ದೇವೆ. ಅವರು ಕೇಳ ತಕ್ಕದ್ದು ಪಿಂಪಲ್ ಆಗಿದೆ. ರೋಸ್ಟರ್ ಪ್ರಕಾರ ರೆಗ್ಯುಲರೈಸ್ ಮಾಡಿ ಕೊಡಿ ಎಂದು ಕೇಳುತ್ತಿದಾರೆ ಅದಕ್ಕೆ ಆಗಬಹುದು ಅಥವಾ ಇಲ್ಲ ಎಂದು ಹೇಳುವುದಕ್ಕೆ ತೊಂದರೆಯೇನು ?

ಅಧ್ಯಕ್ಷರು.—ಮಾಹಿತಿ ತರಿಸಿಕೊಂಡು ಹೇಳುತ್ತೇನೆಂದು ಹೇಳಿದ್ದಾರೆ.

ಶ್ರೀ ಎ. ಲಕ್ಷ್ಮೀಸಾಗರ್.—ಕರ್ನಾಟಕ ಭವನದಲ್ಲಿ ಮತ್ತು ಕುಮಾರ ಕೃಪದಲ್ಲಿ ನೇಮಕಗೊಂಡಿರತಕ್ಕ ಕೆಲಸಗಾರರು ಸಿಆಂಡ್ ಆರ್‌ರೂಲ್ಸ್ ಪ್ರಕಾರ ನೇಮಕಗೊಂಡಿದ್ದಾರೆ. ಇಲ್ಲಿರತಕ್ಕ ಪ್ರಶ್ನೆ ಅವರು ಆ ರೀತಿ ನೇಮಕಗೊಂಡಿಲ್ಲ ಎಂದು ಅದಕ್ಕೊಸ್ಕರ ಆ ನಿಯಮವನ್ನು ಇವರಿಗೆ ಅನ್ವಯಿಸುವುದಕ್ಕಾಗುವುದಿಲ್ಲ.

ನಿಯಮ ೩೫೪ರ ಮೇರೆಗೆ

ಎನ್.ಆರ್. ಡಬ್ಲ್ಯೂ ಸ್ಕೀಮಿನಿಂದ ಕುಡಿಯುವ ನೀರನ್ನು ಅರಕಲಗೋಡು ತಾಲ್ಲೂಕಿನ ಹಳ್ಳಿಗಳಿಗೆ ಒದಗಿಸುವ ಬಗ್ಗೆ

ಶ್ರೀ ಕೆ.ಬಿ. ಮಲ್ಲಪ್ಪ.—ಅರಕಲಗೂಡು ತಾಲ್ಲೂಕಿನಲ್ಲಿ ಸುಮಾರು ೩೦೦ ಹಳ್ಳಿಗಳು ಇದ್ದು ಸದರಿ ಹಳ್ಳಿಗಳಿಗೆ ಸಂಬಂದಿಸಿದಂತೆ ೨೫೦ ಕೊಪ್ಪಲುಗಳಿದ್ದು ಎಲ್ಲಾ ಹಳ್ಳಿಗಳಿಗೂ ಕುಡಿಯುವ ನೀರಿನ ಸರಬರಾಜು ಆಗಿರುವುದಿಲ್ಲ. ಕೆಲವು ಹಳ್ಳಿಗಳಿಗೆ ಕೊಳವೆ ಬಾವಿಗಳನ್ನು ಆಳವಡಿಸಿದ್ದರೂ ಕೆಲವು ಕೆಟ್ಟು ಹೋಗಿ ರಿಪೇರಿ ಇಲ್ಲದೆ ಸಂಬಂಧಪಟ್ಟ ಹಳ್ಳಿಯವರು ಕುಡಿಯುವ ನೀರಿಗೆ ಬಹಳ ತೊಂದರೆ ಪಡುವಂತಾಗಿದೆ. ಕೆಲವು ಹಳ್ಳಿಗಳಲ್ಲಿ ಎನ್. ಆರ್. ಡಬ್ಲ್ಯೂ. ಎಸ್. ಮತ್ತು ಮಿನಿ ವಾಟರ್ ಸಪ್ಲೈ ಸ್ಕೀಂನಲ್ಲಿ ತೆಗೆದುಕೊಂಡ ಕೆಲವು ಅರ್ಧಕ್ಕೆ ನಿಂತಿರುವ ಬಗ್ಗೆ ಮಾನ್ಯ ಪಂಚಾಯಿತ್ ರಾಜ್ಯ ಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಈ ವಿಚಾರವನ್ನು ಸಂಬಂಧಪಟ್ಟ ಸಚಿವರ ಗಮನಕ್ಕೆ ತಂದು ಉತ್ತರ ಕೊಡಿಸುತ್ತೇನೆ.

ರಾಣೆಬೆನ್ನೂರು ತಾಲ್ಲೂಕು ಕುಪ್ಪಲೂರು ಗ್ರಾಮದಲ್ಲಿ ಸ್ವಾಧೀನ ಪಡಿಸಿಕೊಂಡ ಜಮೀನಿಗೆ ಪರಿಹಾರಧನ ಪಾವತಿಯಾಗದಿರುವುದು

ಶ್ರೀ ಕೆ. ಬಿ. ಕೋಳಿವಾಡ್.—ರಾಣೆಬೆನ್ನೂರು ತಾಲ್ಲೂಕು ಕುಪ್ಪೆಲೂರು ಗ್ರಾಮದ ಹತ್ತಿರ ಕುಮುದ್ವತಿ ನದಿಯ ಸೇತುವೆಗೆ ಕೂಡಿಸುವರಸ್ತೆ ನಿರ್ಮಾಣಕ್ಕೆ ಜಮೀನುಗಳನ್ನು ಸ್ವಾಧೀನಪಡಿಸಿಕೊಂಡು ಸುಮಾರು ೧೫ ವರ್ಷಗಳಾಗಿವೆ. ಆವುಗಳ ಬಗ್ಗೆ ರಾಣೆಬೆನ್ನೂರು ಸಿವಿಲ್ ಜಡ್ಜ್ ಕೋರ್ಟಿನಲ್ಲಿ ಅವಾರ್ಡ್ ಸಹ ಆಗಿದ್ದು ಇದೆ. ಸದರಿ ಕೇಸುಗಳ ಬಗ್ಗೆ ವರಖಾಸ್ತು ನಡೆದಿದ್ದು ಅಧಿಕಾರಿಗಳ ಅಲಕ್ಷ್ಯ ತನದಿಂದ ಬೇಳೆ ರೈತರಿಗೆ ಪಣ ಸಿಗುವಂತಾಗಿ ಬಹಳ ತೊಂದರೆಯಾಗಿದೆ ಆದ್ದರಿಂದ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಕ್ತ ಆದೇಶ ನೀಡಿ ಭೇಗನೆ ಬಡ ರೈತರಿಗೆ ಹಣ ಸಿಗುವಂತೆ ಮಾಡುವಿರೆಂಬ ಕಂತೊ ಪಲದಿಂದ ಈ ವಿಷಯವನ್ನು ಮಾನ್ಯ ಕಂದಾಯ ಮಂತ್ರಿಗಳ ಗಮನಕ್ಕೆ ತರಬಯಸುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಅಧ್ಯಕ್ಷರೇ ನಾನು ಈ ಕೆಳಗಿನ ಹೇಳಿಕೆಯನ್ನು ನೀಡಬಯಸುತ್ತೇನೆ.

ರಾಣೆಬೆನ್ನೂರು ತಾಲ್ಲೂಕು, ಕುಮುದ್ವತಿ ನದಿಯ ಸೇತುವೆಗೆ ಕೂಡಿಸುವ ರಸ್ತೆ ನಿರ್ಮಾಣಕ್ಕಾಗಿ ಕುಪ್ಪೆಲೂರ, ಗೋಡಿಹಾಳ ಮತ್ತು ಯಲಬಡಗಿ ಗ್ರಾಮಗಳಲ್ಲಿ ಈ ಕೆಳಗೆ ವಿವರಿಸಿದಂತೆ ಒಟ್ಟು ೨೮ ಎಕರೆ ೨೨ ಗುಂಟೆ ೦೩ ಚೆದುರ ಅಡಿ ಕ್ಷೇತ್ರದ ಜಮೀನುಗಳನ್ನು ಸ್ವಾಧೀನ ಮಾಡಲು ಆದೇಶವನ್ನು ಹೊರಡಿಸಲಾಗಿದ್ದು, ಕಲಂ ೬(೧)ರ ಅಧಿಸೂಚನೆಯು ದಿನಾಂಕ ೫-೭-೧೯೭೫ರ ರಾಜ್ಯ ಪತ್ರದಲ್ಲಿ ಪ್ರಕಟವಾಗಿದೆ.